16079

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಐ 42 ಎಂಎಂಎನ್ 2021

ಕರ್ನಾಟಕ ಸರ್ಕಾರದ ಸಚಿವಾಲಯ,
1ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ 20.01.2022.

**ಅಧಿಸೂಚನೆ**

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-A(2) ರನ್ವಯ ಕೆಳಗೆ ನಮೂದಿಸಿರುವ ಅಲಂಕಾರಿಕ ಶಿಲೆ (ಮಲ್ಟಿಕಲರ್ ಗ್ರಾನೈಟ್) ಕಲ್ಲುಗಣಿ ಗುತ್ತಿಗೆಯ ಅವಧಿಯನ್ನು ಇದರೊಂದಿಗೆ ಲಗತ್ತಿಸಿರುವ ನಕಾಶೆ ಮತ್ತು ಚೆಕ್ಕುಬಂದಿಯಂತೆ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ವಿಸ್ತರಿಸಲು ಸರ್ಕಾರದ ಅನುಮೋದನೆ ನೀಡಿದೆ.

| | |
|---|---|
| Name of the mining lease holder | M/s Sudharshan Stone Enterprises Pvt. Ltd., |
| Quarry Lease No. and Mineral Name | 403 (Multi Colour Granite) |
| Execution date and period | 30.12.2000 /10 years<br>14.07.2014 /20 years |
| Location and extent | Madya District,<br>Nagamangala Taluk,<br>Erubanahalli Village,<br>Sy.No. 73,<br>06-00 Acres. |
| Deemed extension period u/s 8-A(2) of KMMC (Amendment) Rules, 2016 | From: 30.12.2000 to 29.12.2030 (30 years) |

DD(MA)

Office of the Director
Dept. of Mines & Geology
27 JAN 2022
Bengaluru

ಆಪ್ತ ಶಾಖೆ
30 6202 21/1/22

**<u>ಷರತ್ತು ಮತ್ತು ನಿಬಂಧನೆಗಳು:</u>**

1. ಈ ಗಣಿಗಾರಿಕೆ ಪರವಾನಗಿಯು ಮಲ್ಟಿಕಲರ್ ಗ್ರಾನೈಟ್ ಉಪ ಖನಿಜಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಈ ಉಪ ಖನಿಜದೊಂದಿಗೆ ಹೊಸ / ಬೇರೆ ಉಪ ಖನಿಜ ಕಂಡುಬಂದಲ್ಲಿ, ಗುತ್ತಿಗೆದಾರರು ಅದನ್ನು ಸಕ್ಷಮ ಪ್ರಾಧಿಕಾರದ ಗಮನಕ್ಕೆ ತರತಕ್ಕದ್ದು ಮತ್ತು ಸದರಿ ಖನಿಜವನ್ನು ನಿಯಮಾನುಸಾರ Lease Deed ನಲ್ಲಿ ಸೇರ್ಪಡೆ ಮಾಡಿದ ನಂತರವೇ ಗಣಿಗಾರಿಕೆ ಮಾಡತಕ್ಕದ್ದು.
2. ಹಿರಿಯ ಭೂವಿಜ್ಞಾನಿಯವರ ಕಚೇರಿಯಿಂದ ನಡೆಸಿದ ಅರ್ಜಿತ ಪ್ರದೇಶದ DGPS ಸರ್ವೆ ವರದಿಯಲ್ಲಿ ಗಡಿಬಾಂದುಗಳಲ್ಲಿ ವ್ಯತ್ಯಾಸ, ಅಕ್ಷಾಂಶ-ರೇಖಾಂಶಗಳಲ್ಲಿ ವ್ಯತ್ಯಾಸವಾಗಿರುವ ಬಗ್ಗೆ, ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಸದರಿ ಗುತ್ತಿಗೆ ನವೀಕರಣ ಪೂರ್ವದಲ್ಲಿ ಪರಿಶೀಲಿಸಿಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳತಕ್ಕದ್ದು.
3. ಅರ್ಜಿತ ಪ್ರದೇಶದಲ್ಲಿನ ಖನಿಜ ನಿಕ್ಷೇಪದ Differential Global Positioning System (DGPS) Levelsನ ವಿವರಗಳನ್ನು ಪಡೆದ ನಂತರವೇ ಗುತ್ತಿಗೆಯನ್ನು ಅಮಲ್ಜಾರಿಗೊಳಿಸುವುದು.

--2

4. ಈ ಕಲ್ಲು ಗಣಿಗಾರಿಕೆ ಗುತ್ತಿಗೆ ಪ್ರದೇಶದ ಗಡಿಯನ್ನು DGPS Survey ನಡೆಸಿ ಗಡಿ ಬಾಂದು ಕಲ್ಲುಗಳನ್ನು (Boundary pillars) ಹಾಗೂ ಗಡಿ ಗುರುತುಗಳನ್ನು ನಿರ್ಮಿಸುವುದು ಹಾಗೂ ಎಲ್ಲಾ ಕಾಲದಲ್ಲಿಯೂ ಅದನ್ನು ನಿರ್ವಹಿಸುವ ವೆಚ್ಚವನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.
5. ಈ ಕಲ್ಲು ಗಣಿಗಾರಿಕೆ ಗುತ್ತಿಗೆದಾರರು ಗಣಿ ಗುತ್ತಿಗೆ ಕರಾರನ್ನು (Lease Deed) ಅಮಲ್ಜಾರಿ ಮಾಡಿಸಿಕೊಂಡು ಸಂಬಂಧಿಸಿದ ಉಪ ನೋಂದಣಾಧಿಕಾರಿಯವರಲ್ಲಿ ನೋಂದಣಿ ಮಾಡಿಸಿಕೊಂಡು ನಂತರವೇ ಗಣಿಗಾರಿಕೆ ಕಾರ್ಯವನ್ನು ಪ್ರಾರಂಭಿಸತಕ್ಕದ್ದು.
6. ಈ ಕಲ್ಲು ಗಣಿಗಾರಿಕೆ ಗುತ್ತಿಗೆದಾರರು ಚಾಲ್ತಿಯಲ್ಲಿರುವ ಎಲ್ಲಾ ಕಾರ್ಮಿಕ ಕಾನೂನುಗಳನ್ನು (Labour Laws) ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ಈ ಕಲ್ಲು ಗಣಿಗಾರಿಕೆ ಗುತ್ತಿಗೆ ಮಂಜೂರು ಮಾಡಲಾದ ಪ್ರದೇಶದಲ್ಲಿ ಗಣಿಗಾರಿಕೆ ಪರವಾನಗಿ ಸಂಖ್ಯೆ, ಮಾಲೀಕರ ಹೆಸರು, ವಿಳಾಸ ಮತ್ತು ಪರವಾನಗಿ ದಸ್ತಾವೇಜು ಅಮಲ್ಜಾರಿಯಾದ ದಿನಾಂಕ ಇತ್ಯಾದಿ ವಿವರಗಳನ್ನೊಳಗೊಂಡಂತೆ ದಪ್ಪ ಅಕ್ಷರಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಫಲಕವನ್ನು ಪ್ರದರ್ಶಿಸತಕ್ಕದ್ದು.
8. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದ ನಿಯಮಗಳನ್ವಯ ಶೆಡ್ಯೂಲ್-I ರಲ್ಲಿ ನಿಗದಿಪಡಿಸಿರುವ ದರದಲ್ಲಿ ಸ್ಥಿರ ಬಾಡಿಗೆ ಹಾಗೂ ಶೆಡ್ಯೂಲ್-II ರಲ್ಲಿ ನಿಗದಿಪಡಿಸಿರುವ ದರದಲ್ಲಿ ರಾಜಧನ, ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯನ್ನು (DMF) ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಗುತ್ತಿಗೆದಾರರು ಪಾವತಿಸತಕ್ಕದ್ದು.
9. ಈ ಕಲ್ಲು ಗಣಿಗಾರಿಕೆ ಗುತ್ತಿಗೆ ಮಂಜೂರಾತಿಯು Mines Act, 1952(35 of 1952), MMR, 1961, MM(D&R) Act, 1957, Minimum Wages Act, 1936, Contract Labour (Regulation & Abolition) Act, 1970 & Rules, 1971, Water, Air (Prevention & Control of Pollution) Act, 1974 & Indian Explosive Act, 1984, KMMCR, 1994 ಹಾಗೂ ಅನ್ವಯಿಸುವ ಇತರೆ ಕಾಯ್ದೆ ಮತ್ತು ನಿಯಮಗಳನ್ನು ಹಾಗೂ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
10. ಭಾರತ ಸರ್ಕಾರದ ಪರಿಸರ ಮಂತ್ರಾಲಯವು ಜಾರಿಗೆ ತಂದಿರುವ ಪರಿಸರ ಆಘಾತ ಅಂದಾಜೀಕರಣ (SEIAA/DEIAA) ಅಧಿಸೂಚನೆ ದಿನಾಂಕ 14.09.2006ರನ್ವಯ Environmental clearance ನ್ನು ಮತ್ತು ಕಾಲಕಾಲಕ್ಕೆ ಹೊರಡಿಸುವ ತಿದ್ದುಪಡಿಗಳನ್ನು ಪಾಲಿಸತಕ್ಕದ್ದು.
11. ಈ ಕಲ್ಲು ಗಣಿಗಾರಿಕೆ ಗುತ್ತಿಗೆ ಪ್ರದೇಶದಲ್ಲಿ ಉತ್ಪಾದನೆಯಾಗುವ ಉಪ ಖನಿಜವನ್ನು ಸರ್ಕಾರ ಅಥವಾ ನಿಯಂತ್ರಣ ಪ್ರಾಧಿಕಾರವು ಉಪ ಖನಿಜವನ್ನು ಖರೀದಿಸುವ ಸಮಯದಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ದರದಲ್ಲಿ ಖರೀದಿಸುವ ಪೂರ್ಣ ಹಕ್ಕನ್ನು ಹೊಂದಿರುತ್ತದೆ.
12. ಈ ಕಲ್ಲು ಗಣಿಗಾರಿಕೆ ಗುತ್ತಿಗೆ ದಸ್ತಾವೇಜು ಅಮಲ್ಜಾರಿಯಾದ ದಿನಾಂಕದಿಂದ ಒಂದು ವರ್ಷದೊಳಗೆ ಕಲ್ಲು ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವರು ಗಣಿಗಾರಿಕೆ ಕಾರ್ಯವನ್ನು ಪ್ರಾರಂಭಿಸಲು ವಿಫಲವಾದಲ್ಲಿ ಗುತ್ತಿಗೆಯನ್ನು ಕೊನೆಗಾಣಿಸಲಾಗುವುದು.
13. ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 18 ರ ಉಪ ನಿಯಮ 3(ಎ) ಮತ್ತು 3(ಸಿ) ರಂತೆ ಕಲ್ಲು ಗಣಿಗಾರಿಕೆಯನ್ನು ನಿರ್ವಹಿಸತಕ್ಕದ್ದು.

--3

14. ಈ ಕಲ್ಲು ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರಾತಿ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಗಣಿ ಗುತ್ತಿಗೆದಾರರು ನಮೂನೆ 'ಇ' ರನ್ವಯ ಗುತ್ತಿಗೆ ದಸ್ತಾವೇಜನ್ನು ಅಮಲ್ಜಾರಿ ಮಾಡಿಕೊಳ್ಳಲು ವಿಫಲವಾದಲ್ಲಿ, ಮಂಜೂರು ಮಾಡಲಾಗಿರುವ ಗಣಿಗಾರಿಕೆ ಗುತ್ತಿಗೆಯನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 18(1) ರನ್ವಯ ರದ್ದುಗೊಳಿಸಿದೆ ಎಂದು ಪರಿಗಣಿಸಲಾಗುವುದು.
15. ಸಾರ್ವಜನಿಕರಿಗೆ, ಖಾಸಗಿ ಮತ್ತು ಸಾರ್ವಜನಿಕ ಆಸ್ತಿಗೆ ತೊಂದರೆ ಉಂಟು ಮಾಡದಂತೆ ಹಾಗೂ ತೋಪು ಮತ್ತು ಅದರ ತೇವಾಂಶಕ್ಕೆ ಧಕ್ಕೆ ಬಾರದಂತೆ ಮತ್ತು ಅರಣ್ಯೀಕರಣ ಯೋಜನೆಗೆ ತೊಂದರೆಯಾಗದಂತೆ ಗಣಿಗಾರಿಕೆ ನಡೆಸುವ ಷರತ್ತಿಗೊಳಪಟ್ಟಿದೆ.
16. ಈ ಕಲ್ಲು ಗಣಿಗಾರಿಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ವಿಧಿಸುವ ರಾಜಧನ ಮತ್ತು ವಿವಿಧ ಶುಲ್ಕಗಳನ್ನು ಪಾವತಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
17. ಈ ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ಉತ್ಪಾದನೆಯಾಗುವ ಕಲ್ಲು ಗಣಿಗಾರಿಕೆ ತ್ಯಾಜ್ಯಗಳನ್ನು (waste rocks etc, generated in stone quarry) ಜಲ್ಲಿ/ಎಂ-ಸ್ಯಾಂಡ್ ತಯಾರಿಸಲು ಬಳಕೆ ಮಾಡಬಹುದು. ಆದರೆ ಬಳಕೆ ಮಾಡುವ ಮುನ್ನ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯತಕ್ಕದ್ದು.
18. ಈ ಕಲ್ಲು ಗಣಿಗಾರಿಕೆ ಗುತ್ತಿಗೆ ಮಂಜೂರಾತಿಯು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿವಿಧ ನ್ಯಾಯಾಲಯಗಳು, ಪ್ರಾಧಿಕಾರಗಳು ಅಥವಾ ಯಾವುದೇ ಶಾಸನಬದ್ಧ / ಪ್ರಾಧಿಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.
19. ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 7 ರನ್ವಯ ಸಕ್ಷಮ ಪ್ರಾಧಿಕಾರ ವಿಧಿಸುವ ಯಾವುದೇ ಹೆಚ್ಚುವರಿ ಷರತ್ತುಗಳನ್ನು ಗುತ್ತಿಗೆ ಕರಾರಿನಲ್ಲಿ ಸೇರಿಸುವ ಷರತ್ತಿಗೆ ಕಲ್ಲು ಗಣಿಗಾರಿಕೆ ಗುತ್ತಿಗೆದಾರರು ಒಳಪಟ್ಟಿರುತ್ತಾರೆ.
20. ಅಮಲ್ಜಾರಿ ಮಾಡುವ ಮುನ್ನ ಕೆ.ಎಂ.ಎಂ.ಸಿ. ತಿದ್ದುಪಡಿ ನಿಯಮಾವಳಿಗಳ ನಿಯಮ 8-ಸಿ ರನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮೋದಿತ ಕ್ವಾರಿ ಪ್ಲಾನ್ ರನ್ವಯ ಪರಿಸರ ವಿಮೋಚನಾ ಪತ್ರವನ್ನು ಗುತ್ತಿಗೆದಾರರು ಪಡೆದುಕೊಂಡಿರುವುದನ್ನು ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಡ್ಯ ಜಿಲ್ಲೆ ಇವರು ಖಚಿತಪಡಿಸಿಕೊಳ್ಳತಕ್ಕದ್ದು.
21. ಅಮಲ್ಜಾರಿ ಪೂರ್ವದಲ್ಲಿ ಗುತ್ತಿಗೆ ಮೇಲಿನ ಎಲ್ಲಾ ಬಾಕಿಯನ್ನು ಗುತ್ತಿಗೆದಾರರಿಂದ ಕಡ್ಡಾಯವಾಗಿ ಪಾವತಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಿವಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಗಣಿ).

**ಇವರಿಗೆ:**

ಮೆ|| ಸುದರ್ಶನ್ ಸ್ಟೋನ್ ಎಂಟರ್ ಪ್ರೈಸಸ್., ನಂ. 25, 2ನೇ ಮಹಡಿ, 9ನೇ ಕ್ರಾಸ್, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-20.

**ಪ್ರತಿಗಳನ್ನು:**

1. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಬೆಂಗಳೂರು.
2. ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ, ಮಂಡ್ಯ ಜಿಲ್ಲೆ.
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ಜಿಲ್ಲೆ.
4. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಡ್ಯ ಜಿಲ್ಲೆ.
5. ತಹಸೀಲ್ದಾರ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ.
3. ಸರ್ಕಾರದ ಜಂಟಿ ಕಾರ್ಯದರ್ಶಿ(ಗಣಿ)ಯವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.